doc-519
T.P-2

Reg No B G 155 31—7—72

55th Year of Publication ★ 'Satyavadi' daily, Mysore 4.

In the State – The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಆಚರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದ್ದಾರ್, ಎಂ ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಐದು ವರ್ಷಗಳಲ್ಲಿ ಕನ್ನಡ ಅಧಿಕೃತ ಭಾಷೆ

ಪಾರ್ಲಿಮೆಂಟಿಗೆ ಅಸನ್ಮಾನಕರ

ಜಯಪುರ –ಸಿಮ್ಲಾ ಒಪ್ಪಂದಕ್ಕೆ ಪಾರ್ಲಿಮೆಂಟಿನ ಸಮ್ಮತಿ ಪಡೆಯುವುದಕ್ಕೆ ಮುಂಚಿತವಾಗಿ ಭಾರತ ಅಧ್ಯಕ್ಷರಿಂದ ಸ್ಥಿರಪಡಿಸಿ ತನ್ಮೂಲಕ ಭಾರತ ಸರ್ಕಾರವು ಪಾರ್ಲಿಮೆಂಟಿಗೆ ತೀವ್ರ ಅಸಭ್ಯತೆ ವ್ಯಕ್ತಪಡಿಸಿದೆ ಎಂದು ಜನಸಂಘದ ಅಧ್ಯಕ್ಷ ಶ್ರೀ ವಾಜಪೇಯಿಯವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು – ರಾಜ್ಯಾಂಗ ತಿದ್ದುಪಡಿ ಇಲ್ಲದೆ ಪಾಕಿಸ್ತಾನಕ್ಕೆ ಆಕ್ರಮಿತ ಪ್ರದೇಶಗಳನ್ನು ಕೊಡಲು ನಿಜಸ್ಥಿತಿಯಲ್ಲಿ ಸಾಧ್ಯವಿಲ್ಲವೆಂದೂ, ಪಾರ್ಲಿಮೆಂಟು ಸಮ್ಮತಿಸುವವರೆಗೆ ಸಿಮ್ಲಾ ಒಪ್ಪಂದವನ್ನು ಸ್ಥಿರಪಡಿಸಬಾರದೆಂದು ತಾವು ಅಧ್ಯಕ್ಷರನ್ನು ಕೇಳಿಕೊಂಡಿದ್ದರೂ ಅವರು ನಮ್ಮ ಏನಂತಿಗೆ ಲಕ್ಷ್ಯ ಕೊಡಲಿಲ್ಲವೆಂದು ಹೇಳಲು ವ್ಯಸನವಾಗುತ್ತದೆಂದೂ ತಿಳಿಸಿದರು.

ಬೆತ್ತಲೆ ಹುಡುಗಿಯರ ಅವಾಂತರ

ಲಂಡನ್— 5 ಮಂದಿ ಬೆತ್ತಲೇ ಹುಡುಗಿಯರು ಪ್ರಧಾನಿ ಶ್ರೀ ಎಡ್ವರ್ಡ್ ಹೀತ್‌ರವರನ್ನು, ತಮ್ಮ ಕುಟುಂಬದ ಉತ್ಸವದಲ್ಲಿ ಪಿಯಾನೋ ಬಾರಿಸುವಂತೆ ಕೇಳಲು ಹೋದರು – ಪ್ರಧಾನಿಗಳು ಮನೆಯಲ್ಲಿರಲಿಲ್ಲ – ಅವರ ಫೋಟೋಗಳನ್ನು ಪ್ರವಾಸಿಕರು ತೆಗೆಯಲು ಪಕ್ಕಮಿಸಿದಾಗ, ಪೋಲೀಸರು ಬಂದು ಆ ಹುಡುಗಿಯರನ್ನು ಎಳೆದುಕೊಂಡು ಹೋದರು – ಆದಕ್ಕೆ ಮುಂಚೆ ಈ ಬೆತ್ತಲೆ ಹುಡುಗಿಯರು ಒಂದು ಬಾಡಿಗೆ ಬಸ್‌ನಲ್ಲಿ ಸುತ್ತುತ್ತಾ, ಮಧ್ಯೆಮಧ್ಯೆ ಇಳಿದು, ತಮ್ಮ ಕುಣಿದಾಡುವ ಉತ್ಸವದ ಹತ್ತು ಪತ್ರಿಕೆಯನ್ನು ಹಂಚುತ್ತಿದ್ದರು.

★ ಡೊರಾಡೊ— ಆಸ್ಟ್ರೇಲಿಯಾದ 20 ವರ್ಷದ ಕೆರಿ ವೆಲ್ಸ್, ವಿಶ್ವಸುಂದರಿಯಾಗಿ ಆಯ್ಕೆಯಾದಳು.

★

ಚಾಮರಾಜ ಮೊಹಲ್ಲಾ ಕೆನರಾ ಬ್ಯಾಂಕ್

ಮೈಸೂರು— ಬ್ಯಾಂಕು ರಾಷ್ಟ್ರೀಕರಣದ ತೃತೀಯ ವಾರ್ಷಿಕೋತ್ಸವವು ಚಾಮರಾಜ ಮೊಹಲ್ಲಾ ಕೆನರಾ ಬ್ಯಾಂಕ್ ಶಾಖೆಯಲ್ಲಿ ಸರಳ ರೀತಿಯಲ್ಲಿ ಚೆನ್ನಾಗಿ ಆಚರಿಸಲ್ಪಟ್ಟಿತು. ಆಹ್ವಾನಿತರನ್ನು ಮ್ಯಾನೇಜರ್ ಶ್ರೀ ನಾರಾಯಣ ಶೆಣೈ ಕವಲೂ ಮತ್ತು ಇತರ ಉದ್ಯೋಗಸ್ಥರೂ ಆದರದಿಂದ ಸ್ವಾಗತಿಸಿ, ವಿಶ್ವಾಸದಿಂದ ಸತರಿಸಿದರು. ಬ್ಯಾಂಕಿನ ಸಂಬಂಧಪಟ್ಟ ವಿಷಯಗಳನ್ನು ವಿವರಿಸಿ, ಜನತೆಯ ಪ್ರೋತ್ಸಾಹ ಮತ್ತು ಪಹಕಾರಕ್ಕಾಗಿ ವಂದಿಸಿದರು. ಬ್ಯಾಂಕಿನವರ ಸೌಹಾರ್ದ ವರ್ತನೆ, ಅವರ ಗಮನಕ್ಕೆ ತರಲಾದ ಎಂತಹ ಚಿಕ್ಕ ಕೊಂದುಕೊರತೆಯನ್ನು ಸರಿಪಡಿಸುವ ಸದ್ಭಾವನೆ ಎಲ್ಲ ರೀತಿಯ ಬ್ಯಾಂಕಿಂಗ್ ವ್ಯವಹಾರಪಲ್ಲಿಗ್ರಾಹಕರಿಗೆ ಸೂಕ್ತ ಗಮನ ಮತ್ತು ಸಹಾಯ ನೀಡುತ್ತಿರುವುದರಿಂದ, ಈ ಬ್ಯಾಂಕು ಕೆಲವು ವರ್ಷಗಳಿಂದೀಚೆಗೆ ಸ್ಥಾಪಿತವಾಗಿರುವುದಾದರೂ, ಇತ್ತಕಡೆ ಹೆಚ್ಚು ಜನಪ್ರಿಯವಾಗುತ್ತಿರುವುದು ಪ್ರಶಂಸನೀಯವು.

ಸರಕಾರಿ ಪತ್ರಿಕಾ ಪ್ರಕಟಣೆ

ಬೆಂಗಳೂರು— ಮೈಸೂರು ವಿಭಾಗದಲ್ಲಿ 60000 ನಿವೇಶನಗಳನ್ನು ಆಗಸ್ಟ್ 15 1972ರ ಹೊತ್ತಿಗೆ ಭೂರಹಿತರು ಹಾಗೂ ಸ್ವಂತವಾಸಿಯಿಲ್ಲದವರಿಗೆ ಹಂಚಲು ಯೋಜಿಸಲಾಗಿದೆಯೆಂದು ವಿಭಾಗಾಧಿಕಾರಿ ಶ್ರೀ ಜಿ ಎಸ್. ಶ್ರೀನಿವಾಸರಪರು ಇತ್ತೀಚೆಗೆ ತಿಳಿಸಿದರು.

★

ಹಕ್ಕುವಿನಿಂದ ಸಾವು

ಬೆಂಗಳೂರು— ಬಿಜಾಪುರ ಜಿಲ್ಲೆಯಲ್ಲಿ ಹಸಿವಿನಿಂದ ಒಂದು ಸಾವಾಯಿತೆಂದು ಶಾಸನಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಹೇಳಿದರು.

ಅಭಿನಂದನಾ ಸಮಾರಂಭ

ಮೈಸೂರು— ಚಾಮರಾಜ ಅರಸು ಬೋರ್ಡಿಂಗ್ ಸ್ಕೂಲಿನವರು ಮುಖ್ಯಮಂತ್ರಿ ಶ್ರೀ ದೇವರಾಜಅರಸ್‌ರವರನ್ನು ಅಭಿನಂದಿಸಲು ಏರ್ಪಡಿಸಿದ್ದ ಸಭೆಯಲ್ಲಿ – ಮುಖ್ಯ ಮಂತ್ರಿಗಳು ಮಾಡಿದ ಭಾಷಣದಲ್ಲಿ ನಾಯಕರು ತಮ್ಮತಮ್ಮ ಕೋಮುಗಳ ಅಭಿವೃದ್ಧಿ ಬಗ್ಗೆ ಮಾತನಾಡುವದರ ವಿಚಾರದಲ್ಲಿ ಎಚ್ಚರಿಕೆ ನೀಡುತ್ತಾ, ಜಾತಿ ಕೋಮುಗಳನ್ನು ತೊಡೆದುಹಾಕುವದು ಜಾತ್ಯತೀತದ ಗುರಿಯಲ್ಲವೆಂದೂ ಆದರೆ ಸಮಾಜದ ಹಿತಕ್ಕೆ ಪೂರಕ ಪಡೆಸುವ ಕೋಮುವಾರು ಹುಚ್ಚನ್ನು ಮಟ್ಟಹಾಕಬೇಕಾಗುವುದೆಂದೂ ಹೇಳಿದರು – ಮುಖ್ಯ ಮಂತ್ರಿಗಳ ಬಗ್ಗೆ ಪ್ರಶಂಸನೀಯ ಭಾಷಣಗಳಾದವು – ಶ್ರೀಯುತರ ಹೆಸರಿನಲ್ಲಿ ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕ ನೀಡಲು ವಿಶ್ವವಿದ್ಯಾಲಯಕ್ಕೆ ರೂ 3000 ಚೆಕ್ ಕೊಡಲಾಯ್ತು

5 ವರ್ಷಗಳಲ್ಲಿ ಕನ್ನಡ ಅಧಿಕೃತ ಭಾಷೆ

ಮೈಸೂರು — ವಿಶ್ವವಿದ್ಯಾನಿಲಯದ ಮುದ್ರಣಾಲಯ ಮತ್ತು ಪ್ರಸಾರಂಗದ ಹೊಸ ಕಟ್ಟಡವನ್ನು ಉದ್ಘಾಟಿಸುತ್ತಾ ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು, ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯಾಗಿ ಐದು ವರ್ಷಗಳೊಳಗೆ ಜಾರಿಗೆ ತರುವೆದು ತಮ್ಮ ಮಂತ್ರಿಮಂಡಲದ ಬಲಯುತವಾದ ಆಕಯವೆಂದು ಹೇಳಿದರು.

★

ನಿರುದ್ಯೋಗ ಪೆಡಂಭೂತ

○ ವಿಶ್ವವಿದ್ಯಾನಿಲಯದಲ್ಲಿಯ 60 ಗುಮಾಸ್ತೆ ಕೆಲಸಗಳಿಗೆ ಪದವೀಧರರೂ, ಸ್ನಾತಕೋತ್ತರ ಪದವಿಧರರೂ ಸೇರಿ 8944 ಹುಡುಗರೂ ಹುಡುಗಿಯರೂ ಅರ್ಜಿ ಹಾಕಿರುವಂತೆ!

ಭೀಕರ ಪ್ರವಾಹ

ಷಿಲಾಂಗ್— ಸದಿಯಿಂದ ದುಬ್ರೈ ವರೆಗೆ 800 ಕೆ ಎಂ ಬ್ರಹ್ಮಪುತ್ರಾ ಕಣಿವೆಯಲ್ಲಿ ಬ್ರಹ್ಮಪುತ್ರ ಮತ್ತು ಅದರ ಉಪನದಿಗಳ ಭೀಕರ ವರಡನೇ ಸಾರಿಯ ಪ್ರವಾಹದಲ್ಲಿ 36 ಮಂದಿ ಸತ್ತು ಸಹಸ್ರಾರು ಜಾನುವಾರುಗಳು ಮಡಿದವೆಂದು ಸರ್ಕಾರಿ ವಕ್ತಾರರೊಬ್ಬರು ಹೇಳಿದರು.

ಬಹಿಷ್ಕಾರ

ನವದೆಹಲಿ— ಕಮ್ಯುನಿಸ್ಟು ಮತ್ತು ಡಿಎಂಕೆ ಪಕ್ಷಗಳನ್ನು ಬಿಟ್ಟು, ಮಿಕ್ಕೆಲ್ಲ ವಿರೋಧ ಪಕ್ಷಗಳ ನಾಯಕರು ಪ್ರಧಾನಿಯರು ಕರೆದಿದ್ದ ಪಾರ್ಲಿಮೆಂಟು ನಾಯಕ ಪಕ್ಷಸಭೆಯನ್ನು ಬಹಿಷ್ಕರಿಸಿದ್ದರು.

★

ಜಿಗಜೀವರಾಂ ರಾಜೀನಾಮೆ ಕೊಡಲಿ

ನವದೆಹಲಿ— ರಕ್ಷಣಾ ಮಂತ್ರಿ ಶ್ರೀ ಜಗಜೀವನರಾಂರವರು ಡಿಸೆಂಬರ್ ಯುದ್ಧ ಕಾಲದಲ್ಲಿ " ಈ ಸಾರಿ ಸಶಸ್ತ್ರ ಪಡೆಗಳು ತಾವು ಆಕ್ರಮಿಸುವ ಪಾಕಿಸ್ತಾನ ಪ್ರದೇಶಗಳಿಂದ ವಾಪಸ್ಸಾಗುವ ಅವಶ್ಯಕತೆ ಇಲ್ಲ' ಎಂದು ಹೇಳಿದ್ದುದನ್ನು ಅವರ ಜ್ಞಾಪಕಕ್ಕೆ ತಂದು, ಆ ಭರವಸೆಯನ್ನು ಅನುಸರಿಸದಿರುವದರಿಂದ ಅವರು ರಾಜೀನಾಮೆ ಕೊಡಬೇಕೆಂದು ಜನಸಂಘದ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ನಾನಾ ದೇಶ್‌ಮುಖ್ ಕೇಳಿಕೆ ಹಾಕಿರುವರು.

★

★ ಬೆಂಗಳೂರು– ಭಾರತ ಸ್ವಾತಂತ್ರ್ಯದ 25 ನೇ ವಾರ್ಷಿಕೋತ್ಸವ ಸಂಬಂಧವಾಗಿ ರಾಜ್ಯದಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ, ರಾಜ್ಯ ಸರಕಾರ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯೊಂದನ್ನು ರಚಿಸಿದೆ

ಭಾರತದ ಸಂಗೀತ ವೃದ್ಧಪಿತಾಮಹ

ಖ್ಯಾತ ಸಂಗೀತಗಾರ ಉಸ್ತಾದ್ ಅಲ್ಲಾವುದ್ದಿನ್ ಖಾನ್‌ರು ಮಧ್ಯಪ್ರದೇಶದ ಸಾತಾ ಜಿಲ್ಲೆಯ ತಮ್ಮ ಚಿಕ್ಕ ಊರಾದ ಮೈಹ್ಯಾರ್‌ನಲ್ಲಿ ಮೃತ್ಯುವಿನೊಡನೆ ಹೋರಾಡುತ್ತಾ ಮಲಗಿರುವರು ; ಇಲ್ಲಿ ಅವರು ಅರ್ಧ ಶತಮಾನದಿಂದ ವಾಸಿಸುತ್ತಿರುವರು ; 110 ವರ್ಷದ ಇವರು ಜೂನ್ 14 ರಂದು ಹಗುರವಾದ ಊಟಾನಂತರ ಕುಸಿದು ಬಿದ್ದರು ; ಅಂದಿನಿಂದ ಪ್ರಜ್ಞೆ–ಪ್ರಜ್ಞಾಶೂನ್ಯ ಸ್ಥಿತಿಯಲ್ಲಿ ಒದ್ದಾಡುತ್ತಿದ್ದಾರೆ. ಅವರ ಮನೆಯಾದ ಮೆಡೀನಾ ಭವನದಲ್ಲಿ ತಾವು ಕಟ್ಟಿಕೊಂಡಿರುವ ಘನಾಕಾರದ ಕೋಣೆಯಲ್ಲಿ ಮಲಗಿದ್ದಾರೆ : ಪಕ್ಕದಲ್ಲಿ ಅವರ ಪತ್ನಿ ಮೆಡಿನಾ ಬೇಗಂ, ಅವರ ಸೊಸೆ ಜುಬೇಡಿಯಾ ಅಕ್ಬರ್ ಖಾ, ಅವರ ಮೊಮ್ಮಕ್ಕಳು ಅಮರೀಷ್ ಖಾ ವ್ಯಾಣೇಶ್ ಖಾ ಇರುವರು ಸದಾ ಒಬ್ಬಿಬ್ಬರು ನರ್ಸ್‌ಗಳು ನೋಡಿಕೊಳ್ಳುತ್ತಿರುವರು : ಅವರನ್ನು ಉಳಿಸಲು ಡಾಕ್ಟರುಗಳು ಪ್ರಯತ್ನಿಸುತ್ತಾ ಇಂಜಕ್ಷನ್ನು ಕೊಡುತ್ತಲೇ ಇರುವರು.

ಉಸ್ತಾದರ ಏಕ ಪುತ್ರ ಅಲ್ಲೀ ಅಕ್ಬರ್ ಇವರ ಅಸ್ವಸ್ಥತೆ ಅರಿತು ಕ್ಯಾಲಿಫೋರ್ನಿಯದಿಂದ ಶೀಘ್ರವಾಗಿ ಬಂದರು.

ಉಸ್ತಾದರ ಮನೆ ಎರಡು ಅಂತಸ್ತಿನದಿದ್ದು, ಆಶ್ರಮದ ವಿರಕ್ತಿ ಕಾಣಬರುತ್ತಿದೆ. ಮನೆಯ ಹೊರಗೆ ಕೇಸರಿ ಬಣ್ಣ ಬಳಿದಿರುವುದು ಮಠದಂತೆ ಕಾಣುತ್ತಿದೆ ಮನೆಯಲ್ಲೆಲ್ಲಾ ಕಟ್ಟುಹಾಕಿರುವ ಹಿಂದೂದೇವರ ಪಠಗಳು ತುಂಬಿವೆ. ಉಸ್ತಾದರ ಘನಾಕಾರದ ಕೊಠಡಿಯಲ್ಲಿ ಅವರ ಹಿರಿಯಣ್ಣ ಅಫ್ತಾಬುದ್ದೀನ್ ಖಾನರ ಭಾವಚಿತ್ರವಿದೆ. ಅವರು ತಮ್ಮ ಅವಸಾನ ಕಾಲಕ್ಕೆ ಮುಂಚೆ ಪ್ರಾಪಂಚಿಕ ವ್ಯವಹಾರ ತ್ಯಜಿಸಿ ಕಾವಿಬಟ್ಟೆ ಧರಿಸಿ, ಸಾಧುವಿನಂತೆ ಜೀವಿಸುತ್ತಾ, ದುರ್ಗಾದೇವಿಯ ಸ್ತೋತ್ರವನ್ನು ಹಾಡುತ್ತಿದ್ದರು.

ಉಸ್ತಾದರು ಮಧ್ಯೆಮಧ್ಯೆ ಕೈಕೋರಿಸುತ್ತಾ, ಮಾ ಮಾ ಎಂದು ಕೂಗುತ್ತಿರುವರೆಂದೂ ಅವರ ಸೊಸೆ ಹೇಳಿರುವರು. ಅವರು ದುರ್ಗಾದೇವಿಯ ಅವತಾರವೆನ್ನಲಾದ ಶಾರದಾದೇವಿಯ ಭಕ್ತರಾಗಿದ್ದು. ಅವರು ಆರೋಗ್ಯದಿಂದಿದ್ದವರೆಗೆ, 560 ಹಂತಗಳ ಬೆಟ್ಟ ಹತ್ತಿ ಮೇಲಿರುವ ದೇವಾಲಯಕ್ಕೆ ಹೋಗುತ್ತಿದ್ದರು.

ವುಡ್‌ಲ್ಯಾಂಡ್ಸ್ 28-7-72ರಿಂದ ಆಮೋಘ 13ನೇವಾರ

.... ಚಿತ್ರಾಕರ್ಷ ಕನ್ನಡ ಚಿತ್ರ ....

ಹೃದಯಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವಥ್, ಪಂಡರಿಬಾಯಿ

ನಿರ್ದೇಶನ : ರಾಜಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕಣ್ತೆರದು ನೋಡು

ಅಪೆರಾ 28 7 72 ರಿಂದ

ಫಿಲಂ ಲ್ಯಾಂಡ್‌ರವರ ಮಹೋನ್ನತ ಹಿಂದಿ ಚಿತ್ರ

ಬನ್ ಪೂಲ್

ಪಾತ್ರ : ಜಿತೇಂದ್ರ, ಬಬಿತ

ದಿಗ್ದರ್ಶನ : ವಿಜಯಭಟ್ ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Help The Gorakshana

— Humanitarian Propoganda Monthly ....

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ನೊಕ್ಕಿನ' ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೀಶ ಹೊತ್ತ ಚಿತ್ರ ಸಂದೇಶ್ ರವರ ಜೊಳ್ಳಲು ಚಿತ್ರ

ಆನೆ-ಹುಡುಗ

Quality Printing Neat Binding

Lakshminarasimha Press

Sivarampet, Mysore



Protect the Cow

Edited Printedand Published by Dharmapracharanirata M.S Krishna Rao (Propretor) at the Satvavadi Press Chamarajapuram Mysore

ಛತ್ರಿ, ರೇನ್ ಕೋಟು, ಸೂಟು ಕೇಸು, ಹೋಲ್‌ಆಲ್, ಕಿಟ್ ಬ್ಯಾಗ್‌ಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್, ಮೈಸೂರು.